ಸಿಕ್ಕಿತು. ಜೊತೆಗೆ, ನಾನು ಮತ್ತು ಬೋಧಾಸಿಂಹ ಯುದ್ಧಕ್ಕೆ ಹೋಗುತ್ತೇವೆ, ನೀನು ತಿರುಗಿ ಬರುವಾಗ ನಮ್ಮ ಮನೆಗೆ ಹೋಗಿ ಬಾ, ಎಂಬ ಒಕ್ಕಣಿಕೆಯ ಸುಬೇದಾರ ಹಜಾರಸಿಂಹರ ಕಾಗದವೂ ಸಿಕ್ಕಿತು. ಜೊತೆಗೆ ಹೋಗೋಣ. ಸುಬೇದಾರರ ಊರು ಮಾರ್ಗಮಧ್ಯೆಯೇ ಇತ್ತು ಮತ್ತು ಸುಬೇದಾರರಿಗೆ ತಮ್ಮ ಊರೆಂದರೆ ಎಲ್ಲಿಲ್ಲದ ಪ್ರೀತಿ. ಲಹನಾಸಿಂಹ ಸುಬೇದಾರರ ಮನೆಗೆ ಹೋದನು.

ಅವರ ಮನೆಯಿಂದ ಹೊರಟು ನಿಂತಾಗ ಸುಬೇದಾರ ಅಂತಃಪುರದಿಂದ ಹೊರಗೆ ಬಂದರು ಮತ್ತು ಹೀಗೆ ಹೇಳಿದರು-'ಲಹನಾ, ಸುಬೇದಾರನಿಗೆ ನಿನ್ನ ಪರಿಚಯವಿದೆ. ಕರೆಯುತ್ತಿದ್ದಾಳೆ, ಹೋಗು. ಭೇಟಿಯಾಗಿ ಬಾ.' ಲಹನಾಸಿಂಹ ಒಳಗೆ ಹೋದನು. ಸುಬೇದಾರನಿಯವರಿಗೆ ನನ್ನ ಪರಿಚಯವಿದೆಯಾ? ಯಾವಾಗಿನಿಂದ? ರೆಜಿಮೆಂಟಿನ ಕ್ವಾರ್ಟರ್ಸ್‌ಗಳಲ್ಲಿಯಂತೂ ಯಾವಾಗ್ಯೂ ಸುಬೇದಾರರ ಮನೆಯವರು ಇರಲಿಲ್ಲ. ಬಾಗಿಲ ಹತ್ತಿರ ಹೋಗಿ 'ಸಾಷ್ಟಾಂಗ ನಮಸ್ಕಾರಗಳು' ಎಂದು ಹೇಳಿದನು. ಆಶೀರ್ವಾದ ಕೇಳಿಸಿತು. ಲಹನಾಸಿಂಹ ಮೌನ.

'ನನ್ನನ್ನು ಗುರುತಿಸಿದೆಯಾ?'

'ಇಲ್ಲ.'

'ನಿನ್ನ ನಿಶ್ಚಯವಾಯಿತೆ? ಧತ್, ನಿನ್ನೆ ಆಯಿತು-ರೇಶಮಿ ಬುಟ್ಟಾಗಳ ಶಾಲು ಕಾಣಿಸುತ್ತಿಲ್ಲವೆ-ಅಮೃತಸರದಲ್ಲಿ...' ಭಾವಗಳ ತಾಕಲಾಟದಿಂದ ಮೂರ್ಛೆ ದೂರಾಯಿತು. ಮಗ್ಗಲು ಬದಲಿಸಿತು. ಪಕ್ಕೆಲುಬಿನ ಗಾಯದಿಂದ ರಕ್ತ ಒಸರಿತು.

'ವಜೀರಾ, ನೀರು ಕುಡಿಸು, ಅವಳು ಹೇಳಿದ್ದಳು.'

ಕನಸು ಕಾಣುತ್ತಿದ್ದೇನೆ. ಸುಬೇದಾರನಿ ಹೇಳುತ್ತಿದ್ದಾಳೆ-ನೀನು ಬರುತ್ತಲೇ ನಾನು ನಿನ್ನನ್ನು ಗುರುತಿಸಿದೆ. ಒಂದು ಕೆಲಸ ಹೇಳುತ್ತೇನೆ. ನನ್ನ ಭಾಗ್ಯವಂತೂ ನಷ್ಟವಾಗಿದೆ. ನನಗೆ ಕಷ್ಟದ ದಿನಗಳು. ಸರಕಾರವೇನೊ ಬಹಾದ್ದೂರನ ಪದವಿ ನೀಡಿದೆ. ಲಾಯಲಪುರನಲ್ಲಿ ಜಮೀನು ಕೊಟ್ಟಿದೆ. ಇಂದು ಕೃತಜ್ಞತೆಯನ್ನು ತೋರಿಸುವ ಅವಕಾಶ ಬಂದಿದೆ. ಸುಬೇದಾರರ ಸಂಗಡ ನಾನು ಹೋಗಿಬಿಡುತ್ತಿದ್ದೆ, ಆದರೆ ಸರಕಾರ ಘಾಘರಾ ಧರಿಸುವ ನಮ್ಮ ಸ್ತ್ರೀಯರ ಸೈನ್ಯವನ್ನೇಕೆ ನಿರ್ಮಿಸಲಿಲ್ಲ? ಒಬ್ಬ ಮಗನಿದ್ದಾನೆ. ಅವನು ಸೈನ್ಯ ಸೇರಿ ಒಂದೇ ವರ್ಷವಾಗಿದೆ. ಅವನು ಹುಟ್ಟಿದ ಮೇಲೆ ಇನ್ನೂ ನಾಲ್ಕು ಮಕ್ಕಳು ಜನಿಸಿದವು, ಒಂದೂ ಬದುಕಲಿಲ್ಲ. ಸುಬೇದಾರನಿ ಅಳತೊಡಗಿದಳು-

'ಈಗ ಇಬ್ಬರೂ ಯುದ್ಧಕ್ಕೆ ಹೋಗುತ್ತಾರೆ. ನನ್ನ ಭಾಗ್ಯ! ನಿನಗೆ ನೆನಪಿದೆಯೆ? ಒಂದು ದಿನ ಟಾಂಗಾವಾಲಾನ ಕುದುರೆ ಮೊಸರಿನಂಗಡಿಯ ಹತ್ತಿರ ಕೆರಳಿತ್ತು. ಆ ದಿನ ನೀನು ನನ್ನ ಪ್ರಾಣ ಉಳಿಸಿದ್ದಿ. ಕುದುರೆಯ ಒದೆ ತಿನ್ನುತ್ತಿದ್ದರೂ ನನ್ನನ್ನು ಎತ್ತಿ ಅಂಗಡಿಯ ಹಲಗೆಯ ಮೇಲೆ ನಿಲ್ಲಿಸಿದ್ದೆ. ಹಾಗೆಯೇ ಇವರಿಬ್ಬರನ್ನು ಪಾರು ಮಾಡು, ಇದು ನನ್ನ ಪ್ರಾರ್ಥನೆ, ಬೇಡಿಕೆ. ನಿನ್ನೆದುರು ನಾನು ಸೆರಗೊಡ್ಡಿ ಬೇಡುವೆ.'

ಅಳುತ್ತ ಅಳುತ್ತ ಸುಬೇದಾರನಿ ಕೋಣೆಯೊಳಗೆ ಹೋಗಿ ಬಿಟ್ಟಳು. ಲಹನಾ ಕೂಡ ಕಣ್ಣೀರು ಒರೆಸಿಕೊಳ್ಳುತ್ತ ಹೊರಗೆ ಬಂದನು.

ವಜೀರಸಿಂಹ ನೀರು ಕುಡಿಸು-'ಅವಳು ಹೇಳಿದ್ದಳು.' ವಜೀರಸಿಂಹನು ಲಹನಾನ ತಲೆಯನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ಕುಳಿತಿದ್ದಾನೆ. ಅವನು ಕೇಳಿದಾಗ ನೀರು ಕುಡಿಸುತ್ತಾನೆ. ಅರ್ಧ ಘಂಟೆಯವರೆಗೆ ಲಹನಾ ಮೌನಿಯಾಗಿದ್ದನು, ಅನಂತರ ಹೇಳಿದ-'ಯಾರು? ಕೀರತಸಿಂಹ?' 'ಹೌದು.'-ವಜೀರನು ಏನೊ ಅರ್ಥೈಸಿಕೊಂಡು ಹೇಳಿದನು. 'ಸೋದರ, ನನ್ನನ್ನು ಇನ್ನಷ್ಟು ಎತ್ತರಕ್ಕೆ ಇಟ್ಟುಕೊ. ನಿನ್ನ ಎದೆಯ ಮೇಲೆ ನನ್ನ ತಲೆ ಇಟ್ಟುಕೊ.' ವಜೀರನು ಹಾಗೆಯೇ ಮಾಡಿದನು.

'ಹೂಂ, ಈಗ ಸರಿಯಾಗಿದೆ. ನೀರು ಕುಡಿಸು. ಈ ಬಾರಿಯ ಚಳಿಗಾಲದಲ್ಲಿ ಈ ಮಾವಿನ ಮರ ತುಂಬಾ ಹಣ್ಣು ಬಿಡುವದು. ಕಾಕಾ ಮತ್ತು ಸೋದರನ ಮಗ ಇಬ್ಬರೂ ಇಲ್ಲಿಯೇ ಕುಳಿತು ಮಾವು ತಿನ್ನಿರಿ. ಸೋದರನ ಮಗನಿಗೆ ಎಷ್ಟು ವಯಸ್ಸೊ ಅಷ್ಟೇ ದೊಡ್ಡದು ಈ ಮಾವಿನ ಮರ. ಯಾವ ತಿಂಗಳಲ್ಲಿ ಅವನು ಜನಿಸಿದ್ದನೋ ಅದೇ ತಿಂಗಳಲ್ಲಿ ನಾನು ಇದನ್ನು ನೆಟ್ಟಿದ್ದೆನು.' ವಜೀರಸಿಂಹನ ಕಣ್ಣುಗಳು ಹನಿಯುತ್ತಿದ್ದವು.

'ಫ್ರಾನ್ಸ್ ಮತ್ತು ಬೆಲ್ಜಿಯಂ-68ನೇ ಪಟ್ಟಿ-ರಣರಂಗದಲ್ಲಿ ಗಾಯಗಳಿಂದಾಗಿ ನಂ.77 ಸಿಖ್ ರಾಯಿಫಲ ಜಮಾದಾರ ಲಹನಾಸಿಂಹ ವೀರಮರಣ ಹೊಂದಿದನು,' ಎಂದು ಕೆಲವು ದಿನಗಳಾದ ನಂತರ ಜನರು ವರ್ತಮಾನ ಪತ್ರಿಕೆಯಲ್ಲಿ ಓದಿದರು.

●